976 (1010) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ರಾಜ್ಯದಲ್ಲಿ ಇದುವರೆವಿಗೂ ಎಷ್ಟು ಜನ ಭಯೋತ್ಪಾದಕರು ನುಸುಳಿದ್ದಾರೆ,

ಆ) ಈ ಭಯೋತ್ಪಾದಕರನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಈ ಕುರಿತು ನಿಖರವಾದ ಮಾಹಿತಿ ಲಭ್ಯವಿರುವುದಿಲ್ಲ ಆದರೆ ದಿ 2-1-2006 ರಿಂದ 5-2-2007ರವರೆಗೆ ಕರ್ನಾಟಕ ರಾಜ್ಯಕ್ಕೆ ನುಸುಳಿ ಉಗ್ರಗಾಮಿ ಚಟುವಟಿಕೆ ನಡೆಸಿದ್ದ ಈ ಕೆಳಕಂಡ 5 ಜನ ಭಯೋತ್ಪಾದಕರನ್ನು ಬಂಧಿಸಿ ಕಾನೂನು ರೀತ್ಯ ಕ್ರಮ ಜರುಗಿಸಲಾಗಿದೆ

1) ಅಬ್ದುಲ್ ರಾಜೂರ್ ರೆಹಮಾನ್
2) ಅಬ್ದುಲ್ ರೆಹಮಾನ್
3) ಫಹಾದ್
4) ಮಹಮ್ಮದ್ ಆಲಿ ಹುಸೇನ್
5) ಇಮ್ರಾನ್ @ ಜಲಾಲ್

ಆ) ಸರ್ಕಾರವು ಈ ಬಗ್ಗೆ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ

1) ಕರಾವಳಿ ಪಡೆಯನ್ನು ರಚಿಸಲಾಗಿದೆ
2) ಅಂತರರಾಜ್ಯ ಗುಪ್ತಚರ ಇಲಾಖೆ ಮತ್ತು ಕೇಂದ್ರೀಯ ಗುಪ್ತಚರ ಇಲಾಖೆಯೊಂದಿಗೆ ಸತತವಾಗಿ ಸಂಪರ್ಕ ಇಟ್ಟುಕೊಂಡು ಮಾಹಿತಿ ವಿಶ್ಲೇಷಣೆ ಮಾಡಿರುತ್ತೆ
3) ನಬ್ಸಿಡಿಯರಿ ಮಲ್ಟಿ ಏಜೆನ್ಸಿ ಸೆಂಟರ್ (ಎನ್ ಎಂ ಎ ಸಿ)ನ್ನು ರಾಜ್ಯದಲ್ಲಿ ಎನ್ ಐ ಬಿ ಸಂಘಟನೆಯೊಂದಿಗೆ ಸ್ಥಾಪಿಸಲಾಗಿದೆ ದಿ 23-8-2006 ಮತ್ತು ದಿ 13-12-2006ರಂದು ಈ ಬಗ್ಗೆ ಸಮನ್ವಯ ಸಭೆಗಳನ್ನು ನಡೆಸಲಾಗಿರುತ್ತದೆ
4) ಭಯೋತ್ಪಾದಕ ಚಟುವಟಿಕೆಗಳನ್ನು ತಡೆಯಲು ರಾಜ್ಯ ಮಟ್ಟದಲ್ಲಿ ಐ ಜಿ ಪಿ ರವರ ಮುಖಂಡತ್ವದಲ್ಲಿ ಉಗ್ರಗಾಮಿ

ನಿಗ್ರಹ ದಳವನ್ನು ರಚಿಸಿದ್ದು, ಈ ವಡೆಯ ಬಲವರ್ಧನೆಗಾಗಿ 1 ಎಸ್ ಪಿ 2 ಡಿ ಎಸ್ ಪಿ 3 ಪಿ ಐ 40 ವೇದೆಗಳು, 6 ಮಹಿಳಾ ಪೇದೆಗಳು, 10 - ಎ ಪಿ ಸಿ ಚಾಲಕ ಹುದ್ದೆಗಳನ್ನು ಹೊಸದಾಗಿ ನೃಜಿಸಲಾಗಿದೆ

977 (1011) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಬೆಂಗಳೂರು ನಗರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲಕ ಎಷ್ಟು ಹೊಸ ಬಡಾವಣೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ, ನಿವೇಶನಕ್ಕಾಗಿ ಬಂದಿದ್ದ ಅರ್ಜಿಗಳೆಷ್ಟು,

ಆ) ಬೆಂಗಳೂರಿನ ಸಂಚಾರಿ ವ್ಯವಸ್ಥೆ ಸರಿಪಡಿಸಲು ಎಷ್ಟು ಮೇಲು ರಸ್ತೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ, ಅತೀ ವೇಗದಲ್ಲಿ ಬೆಳೆಯುತ್ತಿರುವ ಬೆಂಗಳೂರು ನಗರ ಈ ಬಡಾವಣೆಗಳ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಯಾವ ರೀತಿ ಮಾಡಿದ್ದೀರಿ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ) ಅರ್ಕಾವತಿ ಬಡಾವಣೆ

ನಿವೇಶನಕ್ಕಾಗಿ 2,50,000 ಅರ್ಜಿಗಳು ಬಂದಿರುತ್ತವೆ

ಆ) ಬೆಂಗಳೂರು ನಗರದ ಸಂಚಾರಿ ವ್ಯವಸ್ಥೆಯನ್ನು ಸರಿವಡಿಸಲು ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ

1) ಹೊರ ವರ್ತುಲ ರಸ್ತೆಯಲ್ಲಿ ರಾಮಮೂರ್ತಿನಗರ ರಸ್ತೆ ಸಂದಿಸುವ ಸ್ಥಳದಲ್ಲಿ ಅಂಡರ್ ಪಾಸ್ ನಿರ್ಮಾಣ

2) ಮಾಗಡಿ ರಸ್ತೆ ಮತ್ತು ಕಾರ್ಡ್ ರಸ್ತೆ ಸಂದಿಸುವಲ್ಲಿ ಅಂಡರ್ ಪಾಸ್ ನಿರ್ಮಾಣ

3) ಮಾರತ್‌ಹಳ್ಳಿ ಬಳಿ ಬೆಂಗಳೂರು ಮತ್ತು ಸೇಲಂ ರೈಲು ಮಾರ್ಗಕ್ಕೆ ಮೇಲು ಸೇತುವೆ ನಿರ್ಮಾಣ

4) ಏರ್‌ಪೋರ್ಟ್ ರಸ್ತೆ ಮತ್ತು ಒಳ ವರ್ತುಲ ರಸ್ತೆ ಸಂದಿಸುವಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣ

ಬೃಹತ್ ಬೆಂಗಳೂರು ಮಹಾನಗರಪಾಲಿಕೆ ವತಿಯಿಂದ ಕೆಳಕಂಡ ಗ್ರೇಡ್ ಸಪರೇಟರ್ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ